ಶ್ರೀ ಡಿ. ಎಸ್. ನಾಡಕರ್ಣಿ.—ತಾಲ್ಲೂಕುಬೋರ್ಡಿನ ಅಧ್ಯಕ್ಷನಾಗಿ ನಾನು ಕೇಳುತ್ತಾ ಇದ್ದೇನೆ, ಆ ರಸ್ತೆಗಳೆಲ್ಲಾ ಕೆಟ್ಟುಹೋಗುತ್ತಾ ಇವೆ, ಅದರಲ್ಲಿ ನಿಮ್ಮ ಜವಾಬ್ದಾರಿ ಏನೂ ಇಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅವರ ಹತ್ತಿರ ಹಣದ ಪ್ರಭಾವ ಇರಬಹುದು ಆ ಮಾತು ಬೇರೆ. ರೂರಲ್ ಕಮ್ಯೂನಿಕೇಷನ್ಸ್ ರೋಡ್ಸ್ ಎಲ್ಲಾ ತಯಾರು ಮಾಡಿದ ಮೇಲೆ ಅವುಗಳ ಮೈನ್‌ಟೆನೆನ್ಸ್ ಮಾಡುವುದು ತಾಲ್ಲೂಕುಬೋರ್ಡು ಜವಾಬ್ದಾರಿ ಎಂಬ ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ರೂರಲ್ ಕಮ್ಯೂನಿಕೇಷನ್ಸ್ ರೋಡ್ಸ್ ಮೈನ್‌ಟೇನ್ ಮಾಡುವ ದಕ್ಕೆ ತಾಲ್ಲೂಕುಬೋರ್ಡಿನವರಿಗೆ ಸರ್ಕಾರದವರು ಎಷ್ಟು ಧನ ಸಹಾಯ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಡಿ. ಎಸ್. ನಾಡಕರ್ಣಿ.—ಫಿಷರೀ ರೋಡ್ಸ್ ರೂರಲ್ ಕಮ್ಯೂನಿಕೇಷನ್ಸ್ ರೋಡ್‌ನಲ್ಲಿ ಬರುವುದಿಲ್ಲ ಎಂದು ಹೇಳಿ ತಗಾದೆ ಮಾಡಿ ಕಳುಹಿಸಿಕೊಟ್ಟಿದ್ದೇವೆ, ಆ ರಸ್ತೆಗಳೆಲ್ಲಾ ಕೆಟ್ಟು ಹೋಗುತ್ತಾ ಇವೆ, ನಮ್ಮ ಕಾರವಾರ ಜಿಲ್ಲೆಯ ಪರಿಸ್ಥಿತಿ ಹಾಗೆ ಆಗಿವೆ, ಇದನ್ನು ವಿಚಾರ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಫಿಷರೀ ರೋಡ್ಸ್ ಬಗ್ಗೆ 25-10-67ರಲ್ಲಿ ಒಂದು ಆಜ್ಞೆ ಮಾಡಿದ್ದೇವೆ, ಅದರ ಪ್ರಕಾರ ಅವುಗಳನ್ನೂ ಕೂಡ ತಾಲ್ಲೂಕುಬೋರ್ಡಿನವರಿಗೆ ವಹಿಸಿಕೊಟ್ಟು ಗ್ರಾಂಟ್ಸ್ ನಲುವಾಗಿ ಮೂರನೇ ಎರಡುಭಾಗ ನಾವು ಕೊಡುತ್ತೇವೆ, ಮೂರನೆ ಒಂದು ಭಾಗ ತಾಲ್ಲೂಕುಬೋರ್ಡಿನವರು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ.

ಶ್ರೀಮತಿ ಲೀಲಾವತಿ ರೈ.—ತಾಲ್ಲೂಕುಬೋರ್ಡಿನವರ ಹತ್ತಿರ ಇದರ ಬಗ್ಗೆ ಹಣ ಇಲ್ಲ ಅವರಿಂದ ಈ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಒಂದು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

Kabini Reservoir Project

56. Sri H. N. NANJE GOWDA (Arkalgud).—

Will the Minister for Public Works be pleased to state :—

(*a*) the estimated cost of the Kabini Reservoir Project when it was started, the progress achieved so far and the time required for the completion of the project ;

(*b*) whether they have made any advance to the contractors and also procured foreign exchange for the purchase of machineries required for the use of the project ; if so, the amount advanced and foreign exchange procured ;

(*c*) whether the contractors have purchased the required machinery and whether the machinery has been used for the project work ;

(*d*) whether the advances have been recovered ; if not, why ;

(*e*) whether Government have permitted any of these contractors to cultivate some of the lands which were acquired for the purpose of the project ?

A.—Sri VEERENDRA PATIL (Minister for Public Works).—

(a) (i) Rs. 320 lakhs as per sanctioned estimate.
(ii) December 1959.
(iii) Works costing Rs. 291.92 lakhs have been executed till the end of November 1967.
(iv) About 5 years from now, subject to the availability of adequate funds.

(b) Advances of Rs. 4 lakhs and Rs. 6.6 lakhs were given to the contractors for the purchase of machinery for use on the project. No foreign exchange was procured for the contractors.

(c) The contractors have purchased the required machinery and a part of the machinery is being used on the project.

(d) The advances have been recovered.

(e) No.

ಶ್ರೀ ಎಚ್. ಎನ್ ನಂಜೇಗೌಡ.—ಈಗ ಹೊಸದಾಗಿ ಏನಾದರೂ ರಿವೈಸ್ ಮಾಡಿಸಿದ್ದೀರಾ? ಮಾಡಿಸಿದ್ದರೆ ಎಷ್ಟು ಅಂತ ಹೇಳುತ್ತೀರಾ?

† ಶ್ರೀ ವಿ ವೀರೇಂದ್ರ ಪಾಟೀಲ್.—ರಿವೈಸ್ ಎಸ್ಟಿಮೇಟು 24 ಕೋಟಿ 80 ಲಕ್ಷ ಆಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಕಂಟ್ರಾಕ್ಟರುಗಳಿಗೆ 4 ಲಕ್ಷ ರೂಪಾಯಿ ಯಂತ್ರೋಪಕರಣಗಳನ್ನು ಕೊಳ್ಳುವುದಕ್ಕೆ, 6.6 ಲಕ್ಷ ರೂಪಾಯಿ ಮುಂಗಡ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ವಿದೇಶೀವಿನಿಮಯ ದೊರಕಿಸಿಕೊಟ್ಟಿಲ್ಲ ಎಂದು ಹೇಳಿದ್ದೀರಿ. ಯಂತ್ರೋಪಕರಣಗಳನ್ನು ಅವರು ಎಲ್ಲಿಂದ ತರಿಸಿದರು? ಯಂತ್ರೋಪಕರಣ ತರಿಸುವುದಕ್ಕೆ ಸರ್ಕಾರದ ಸಹಾಯ ಮಾಡಿದಿರಾ? ದುಡ್ಡು ಕೊಟ್ಟು ನಮ್ಮ ದೇಶದಲ್ಲೇ ಕೊಂಡುಕೊಂಡರೇ ಅಥವಾ ಬೇರೆ ದೇಶದವರಿಂದ ಕೊಂಡು ಕೊಂಡರೇ?

ಶ್ರೀ ವೀರೇಂದ್ರ ಪಾಟೀಲ್.—ನಾವು ಅವರಿಗೇನು ಫಾರಿನ್ ಎಕ್ಸ್‌ಛೇಂಜಿಗೆ ವ್ಯವಸ್ಥೆ ಮಾಡಿ ಕೊಡಲಿಲ್ಲ. ನಾವು ಹಣವನ್ನು ಕೊಟ್ಟೆವು. ಅವರೇ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಕೆಲವು ಯಂತ್ರೋಪಕರಣಗಳು ಮಾತ್ರ ಉಪಯೋಗದಲ್ಲಿವೆ, ಎಂದು ಹೇಳಿದೆ ಉತ್ತರದಲ್ಲಿ. ಅಲ್ಲಿ ಇನ್ನುಳಿದ ಯಂತ್ರೋಪಕರಣಗಳು ಪೂರ್ತಿ ಅಲ್ಲಿ ಕೆಲಸ ಮಾಡದೆ ಇರುವುದಕ್ಕೆ ಕಾರಣವೇನು?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಕೆಲವನ್ನು ಉಪಯೋಗಿಸುತ್ತಿದ್ದಾರೆ, ಇನ್ನು ಕೆಲವನ್ನು ಕೇರಳದಲ್ಲಿ ಉಪಯೋಗ ಮಾಡುತ್ತಿದ್ದಾರೆ. ಆದರೆ ಪ್ರತಿಯೊಂದು ಮೆಷಿನರಿಯನ್ನೂ ಇಲ್ಲಗೇ ತಂದು ಉಪಯೋಗ ಮಾಡಬೇಕೆಂದು ಒತ್ತಾಯ ಮಾಡುವುದೇನೆ.

ಶ್ರೀ ಡಿ. ಎಂ. ಸಿದ್ದಯ್ಯ.—(ಎ) ಪ್ರಶ್ನೆಗೆ ನಾಲ್ಕನೇ ಭಾಗದಲ್ಲಿ ಉತ್ತರವಾಗಿ ಈ ಕಾರ್ಯವನ್ನು ಇನ್ನು ಐದು ವರ್ಷಗಳಲ್ಲಿ ಮುಗಿಸುವುದಾಗಿ ಹೇಳಿದ್ದಾರೆ. ಅಂದರೆ ವರ್ಷಕ್ಕೆ 4 ಕೋಟಿ 5 ಲಕ್ಷದ ಪ್ರಕಾರ ಹಣವನ್ನು ಖರ್ಚು ಮಾಡಬೇಕೆಂದಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಆ ರಿವೈಸ್ಡ್ ಹಣವೆಲ್ಲಾ ಕೆಲಸಕ್ಕಾಗೇ ಮಂಜೂರಾಗಿಲ್ಲ. ಅದರಲ್ಲಿ ಭೂಮಿಯನ್ನು ಅಕ್ವಯರ್ ಮಾಡಿದ್ದಕ್ಕೆ ಕೊಡತಕ್ಕ ಪರಿಹಾರ ಮೊಬಲಗೂ ಸೇರಿದೆ. ಅಲ್ಲದೆ ಅಲ್ಲಿ ಹಣದ ಪೂರೈಕೆಯನ್ನು ನೋಡಿಕೊಂಡು ಕೆಲಸ ಮಾಡಬೇಕಾಗಿದೆ.

ಶ್ರೀ ಜಿ. ರಾಮೇಗೌಡ.—ಇದನ್ನು ರಿವೈಜ್ಡ್ ಎಸ್ಟಿಮೇಟ್ ಮಾಡಿದ ಮೇಲೆ ಕಂಟ್ರಾಕ್ಟರು ಹಿಂದಿನ ದರದಲ್ಲೇ ಕೆಲಸವನ್ನು ಮಾಡುತ್ತಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಖರ್ಚಾಗತಕ್ಕ ಬಗ್ಗೆ ಅಷ್ಟು ಹಣ ಬೇಕೆಂದು ಕೇಳಿದ್ದಾರೆ. ಅದಕ್ಕೆ 24 ಕೋಟಿ 80 ಲಕ್ಷ ರಿವೈಜ್ಡ್ ಎಂದಾಜನ್ನು ಮಂಜೂರು ಮಾಡಲಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಕಂಟ್ರಾಕ್ಟರ ಹೇಸರೇನು?

Sri VEERENDRA PATIL.—If the Hon'ble Speaker permits, I have no objection to disclose the name. Usually, names are not disclosed.

Sri H. SIDDAVEERAPPA.—In this case it is said that this amount was given to help him to purchase some machinery out of the foreign exchange. Now, the Minister disclosed that they did not arrange for any foreign exchange and that they only gave the equivalent money in Indian rupee. We would like to know whether actually that machinery was purchased out of the money from abroad or whether that machinery was purchased in India.

Sri VEERENDRA PATIL.—I can tell the hon. Member that a second loan of Rs. 6.6 lakhs was sanctioned to enable the contractor to purchase some more earth-moving equipment. The import licence for procuring the machinery was arranged by the contractors themselves and no import licence was procured for them.

Sri H. SIDDAVEERAPPA.—As a prudent financier, did the Government make enquiries to find out whether the loans they sanctioned out of borrowed money for which we are paying interest were utilised for the purpose for which they were sanctioned or whether they were utilised for some other purpose?

Sri VEERENDRA PATIL.—I said that we have nothing to do with the procurement of foreign exchange and import licence. We have only sanctioned in rupee currency and the contractor made his own arrangements to procure the machinery.

Sri H. SIDDAVEERAPPA.—I want an answer to the effect whether this money was utilised by the loanee for the purpose for which it was sanctioned? It is not a question of arrangingforeign exchange or not. The question is whether it was in fact utilised for Kabini Project.

Sri VEERENDRA PATIL.—So far as my knowledge goes, he did purchase the machinery and out of the machinery that he has purchased he is using some machinery for Kabini Project and he has got some machinery in Kerala and we are insisting that the machinery should be brought here.

Sri H. SIDDAVEERAPPA.—If he is not utilising the machinery, is it not misappropriation?

Sri VEERENDRA PATIL.—Whatever advance we have paid to the contractor we have recovered it entirely. We had put the condition that the machinery should be used only for our projeet. We are also inisisting that he should bring the machinery which he has got in Kerala.

Sri G. DUGGAPPA.—Do Government take immediate steps to recover the money that has been advanced by way of loan?

Sri VEERENDRA PATIL.—I said just now that whatever advance we had paid to the contractor every pie of it has been recovered.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ರಾಜ್ಯದಲ್ಲಿ ಕಷ್ಟಿ ಜಲಾಶಯವನ್ನು ಕಟ್ಟುವುದಕ್ಕಾಗಿ ಬೇಕಾದಂಥ ಮೆಷಿನರಿಗಳನ್ನು ತರಿಸುವುದಕ್ಕಾಗಿ ನೀವು ಹಣ ಕೊಟ್ಟಿದ್ದೀರಿ. ಕರಾರಿನಲ್ಲಿ ಆ ಮೆಷಿನರಿಗಳನ್ನು ತರಿಸಿಕೊಂಡು ಇಲ್ಲಿ ಉಪಯೋಗಮಾಡಬೇಕೆಂದು ಹೇಳಿದ್ದೀರಿ. ಅಂದಮೇಲೆ ನೀವು ಹಣಕೊಟ್ಟು ತಂದಂಥ ಮೆಷಿನರಿಗಳನ್ನು ಕೇರಳಾದಲ್ಲಿನ ಕೆಲಸಕಾರ್ಯಗಳಿಗೆ ಉಪಯೋಗಿಸುವುದು ಅಂದರೇನು ? ಅಲ್ಲಿ ಅನುಕೂಲಮಾಡಿಕೊಡುವುದು ಅಂದರೆ ಏನು ? ಮೆಷಿನರಿ ತರಿಸಿಕೊಂಡಿರುವುದು ಈ ರಾಜ್ಯದ ಪರಿಮಿತಿಗೆ ಸಂಬಂಧಪಟ್ಟುದು. ಒಂದುವೇಳೆ ಕಂಟ್ರಾಕ್ಟರ್ ಹಣವನ್ನು ವಾಪಸ್ಸು ಕೊಟ್ಟಿರಬಹುದು. ಆಮೇಲೆ ಇನ್ನೊಬ್ಬ ಕಂಟ್ರಾಕ್ಟರ್ ಅದಕ್ಕೆ ಬರಬಹುದು. ಆ ಮೆಷಿನರಿಗಳನ್ನು ನಮ್ಮ ಸರ್ಕಾರದ ಮುಖಾಂತರ ತರಿಸಿದ್ದೀವೆಂದು ಹೇಳುತ್ತೀರಿ. ಅಂದಮೇಲೆ ಅದನ್ನು ಏಕೆ ಬೇರೆಯವರಿಗೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ತರಿಸಿಕೊಡುವುದಕ್ಕೆ ಪ್ರಯತ್ನಮಾಡಿದ್ದೀರಿ ? ರಾಜ್ಯ ಸರ್ಕಾರದವರು ಹಣ ಕೊಟ್ಟಮೇಲೆ ಅವುಗಳಿಂದ ನಮ್ಮ ರಾಜ್ಯದಲ್ಲಿ ಕೆಲಸಮಾಡಿಸುವುದಕ್ಕೆ ತಕ್ಕ ಕಾನೂನನ್ನು ತೆಗೆದುಕೊಳ್ಳಬೇಕು. ಇದರ ವಿಚಾರದಲ್ಲಿ ಏನೋ ಲಟಿಗೇಷನ್ ಆಯಿತೆಂದು ಕೇಳಿದ್ದೇನೆ. ಅದು ನಿಜವೇ ?

ಶ್ರೀ ವೀರೇಂದ್ರಪಾಟೀಲ್.—ಇಲ್ಲಿ ಹಣ ಕೊಟ್ಟಿದ್ದು ಮೆಷಿನರಿಗಳನ್ನು ಕೊಂಡು ನಮ್ಮ ಪ್ರಾಜೆಕ್ಟಿಗೆ ಉಪಯೋಗಮಾಡಬೇಕೆಂಬುದಾಗಿ. ಆ ರೀತಿ ಹಣ ಕೊಟ್ಟು ಮೆಷಿನರಿಗಳನ್ನು ತಂದ ಮೇಲೆ ಈ ಮಧ್ಯೆ ಕೆಲವು ಡಿಸೈನುಗಳಲ್ಲಿ ಬದಲಾವಣೆಯಾಗಬೇಕಾಯಿತು. ಆದ್ದರಿಂದ ಕೆಲಸ ಸ್ವಲ್ಪಮಟ್ಟಿಗೆ ನಿಲ್ಲಿಸಬೇಕಾಯಿತು. ಹಳೆಯ ದರದಲ್ಲಿ ಆ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಹೊಸ ದರಗಳನ್ನು ಕೊಡಬೇಕೆಂದು ತಕರಾರು ಮಾಡಿದ್ದರಿಂದ ಮತ್ತೆ ಸ್ವಲ್ಪ ಕಾಲ ಕೆಲಸ ನಿಲ್ಲಿಸಬೇಕಾಯಿತು. ಆ ಮೆಷಿನರಿಗಳನ್ನು ಉಪಯೋಗವಿಲ್ಲದೆ ಇದಲಾಗಿದ್ದೂ ಎಲ್ಲೆಲ್ಲಿ ಕೆಲಸವಿತ್ತೋ ಅಲ್ಲಲ್ಲಿಗೆ ಕಳುಹಿಸಿದ್ದಾಯಿತು. ಈಗ ಕೆಲವು ಮೆಷಿನರಿಗಳನ್ನು ತಂದಿದ್ದಾರೆ. ಕೆಲವು ಮೆಷಿನರಿಗಳನ್ನು ತಂದಿಲ್ಲ. ಅವನ್ನೂ ಕೂಡ ತರಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಯೋಜನೆಗಾಗಿ ಮೊದಲು 320 ಲಕ್ಷಗಳಷ್ಟು ಅಂದಾಜಾಗಿ ಈಗ 24 ಕೋಟಿ 80 ಲಕ್ಷ ಅಂದಾಜು ಆಗಲು ಕಾರಣವೇನು ? ಯಾವ್ಯಾವ ಐಟಂಗಳನ್ನು ಹೊಸದಾಗಿ ಸೇರಿಸಿದ್ದೀರಿ ? ಈಗ ಅಂದಾಜು ತಯಾರುಮಾಡಿರುವುದರಲ್ಲಿ ಜಮೀನಿಗೆ ಪರಿಹಾರ ಕೊಡುವುದೂ ಸೇರಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅಂದಾಜು ರಿವೈಜ್ಡ್ ಆಗಿರುವುದಕ್ಕೆ ಅನೇಕ ಕಾರಣಗಳು ಇವೆ. ಮೊದಲು ಪ್ರಾಜೆಕ್ಟ್ ಸ್ಕೋಪ್ ಬಹಳ ಕಡಿಮೆ ಇತ್ತು. ಸ್ಪೋರೇಜ್ ಕೆಪಾಸಿಟಿ 12.3 ಟಿ.ಎಂ.ಸಿ.ಫೀಟ್ ಇದ್ದುದು ಈಗ 19 ಟಿ.ಎಂ.ಸಿ.ಫೀಟ್ ಆಗಿದೆ. ಅಲ್ಲದೆ ಫೌಂಡೇಷನ್ ಡಿಫಿಕಲ್ಟೀಸ್ ಬೇರೆ ಇತ್ತು. ಡೆಪ್ತ್‌ನಲ್ಲಿ ಈಗ ಇರುವುದಕ್ಕಿಂಲೂ ಇನ್ನೂ ಕೆಳಗೆ ಹೋಗಬೇಕಾಗಿತ್ತು. ಅದಕ್ಕೋಸ್ಕರ ಸ್ವಲ್ಪ ಹೆಚ್ಚು ಖರ್ಚು ಆಗಬೇಕಾಯಿತು. ಪೆನ್ ಸ್ಟಾಕ್ ಪೈಪ್ಸ್ ಬೇರೆ ಹಾಕಬೇಕಾಯಿತು. ಪವರ್ ಜನರೇಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನೋಡುತ್ತಿದ್ದೇವೆ. ಇವೆಲ್ಲ ಪ್ರಾವಿಷನ್ಸ್ ಸೇರಿಸಿದರೆ ಅಷ್ಟು ಖರ್ಚಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಕಂಟ್ರಾಕ್ಟರ್ ಹೆಸರನ್ನು ಬಹಿರಂಗಪಡಿಸುವುದಕ್ಕೆ ಸಾಧ್ಯವೇ ?

Sri VEERENDRA PATIL.—I have made it clear that I have no hesitation to disclose the name of the contractor; I sought only the permission of the Chair. If the permission is forthcoming, even now I am prepared to disclose the name.

Sri K. H. PATIL.—The name must have been published. Are we not entitled to know the name of the contractor? It is strange that Speaker's permission is sought to disclose it. Let them announce the name of the contractor.

Mr. DEPUTY SPEAKER.—The name may be disclosed.

Sri VEERENDRA PATIL.—Since the Hon'ble Chair has permitted, I have no hesitation to disclose it. The name is Messrs. Nichupadan Construction Co., and I think, they belong to Kerala. ನಾವು ಸಾಲ ಕೊಟ್ಟಿದ್ದು ಅವರಿಗೆ ಒಂದು ಸಲ 4 ಲಕ್ಷ, ಇನ್ನೊಂದು ಸಲ ಅವರಿಗೆ 6 ಲಕ್ಷ 60 ಸಾವಿರ ರೂಪಾಯಿಗಳು. ಇವೆರಡನ್ನೂ ಆ ಕಂಪೆನಿಯವರಿಗೇ ಕೊಟ್ಟಿದ್ದು.

ಶ್ರೀ ಎಚ್. ಎನ್. ನಂಜೇಗೌಡ.—ಈ ಯೋಜನೆಯ ಉದ್ದೇಶಕ್ಕಾಗಿ ರೈತರಿಂದ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಮಣ್ ಕಪೆನಿಯ ಒಬ್ಬರು ಕಂಟ್ರಾಕ್ಟರು ಮತ್ತು ಇನ್ನೊಬ್ಬರು ಕಂಟ್ರಾಕ್ಟರು ಪಂಪು ಸೆಟ್ಟು ಹಾಕಿಕೊಂಡು ನೀರು ಮತ್ತು ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಸರ್ಕಾರದವರ ಅನುಮತಿ ಇಲ್ಲದೆ ಆ ಜಮೀನನ್ನು ಅವರು ಸಾಗುವಳಿ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ, ಇದರ ಬಗ್ಗೆ ಆಲ್ಲಿಂದ ಸರ್ಕಾರಕ್ಕೆ ವರದಿಯೇನಾದರೂ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಬ್ಬ ಕಂಟ್ರಾಕ್ಟರು ಸ್ವಲ್ಪ ಭೂಮಿಯನ್ನು ಸಾಗು ಮಾಡುತ್ತಿದ್ದಾರೆ. ಅನ್ ಅಥರೈಜ್ಡ್ ಆಗಿ ಕಲ್ಟಿವೇಷನ್ ಮಾಡುವುದಕ್ಕೆ ಅವರಿಗೆ ಪರ್ಮಿಷನ್ ಕೊಟ್ಟಿಲ್ಲ. ಅವರು ಅನ್ ಆಥರೈಸ್ಡ್ ಆಗಿ ಕಲ್ಟಿವೇಷನ್ ಮಾಡುತ್ತಿದ್ದಾರೆ ಎಂದು ರೆವಿನ್ಯೂ ಇಲಾಖೆಯವರು ರಿಪೋರ್ಟ್ ಮಾಡಿದ್ದಾರೆ. ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಎಷ್ಟು ದಿವಸಗಳಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ, ಅವರು ಎಷ್ಟು ಎಕರೆ ಜಮೀನನ್ನು ಅನ್ ಅಥರೈಜ್ಡ್ ಆಗಿ ಕಲ್ಟಿವೇಷನ್ ಮಾಡುತ್ತಿದ್ದಾರೆ ? ಬಡ ರೈತರಿಂದ ಜಮೀನನ್ನು ಕಸಿದುಕೊಂಡು ಆ ಜಮೀನಿನಲ್ಲಿ ಆ ಕಂಟ್ರಾಕ್ಟರು ಪಂಪು ಸೆಟ್ಟು ಹಾಕಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಆದ್ದರಿಂದ ಎಷ್ಟು ದಿವಸಗಳಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಅನ್ ಅಥರೈಜ್ಡ್ ಕಲ್ಟಿವೇಷನ್ ಮಾಡುತ್ತಿದ್ದಾರೆ. ಆದ್ದರಿಂದ ಅನ್ ಆಥರೈಜ್ಡ್ ಕಲ್ಟಿವೇಷನ್ ರಿಮೂವ್ ಮಾಡಿಸಿ ಅವರನ್ನು ಆ ಜಮೀನಿನಿಂದ ಎವಿಕ್ಟ್ ಮಾಡಿಸಬೇಕೆಂದು ರೆವಿನ್ಯೂ ಇಲಾಖೆಯವರಿಗೆ ಬರೆದಿದ್ದೇವೆ. ಯಾವತ್ತು ಬರೆದಿದೆ, ಎಷ್ಟು ದಿವಸಗಳಲ್ಲಿ ರೆವಿನ್ಯೂ ಇಲಾಖೆಯವರು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಮಾಹಿತಿ ನನ್ನಲ್ಲಿ ಇಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ಆ ವಿಚಾರವನ್ನು ಹೇಳುತ್ತೇನೆ.

WATER SUPPLY SCHEME FOR THE SHORAPUR TWON

57. Sri RAJA PID NAIK (Shorapur).—

Will the Minister for Municipal Administration be pleased to state:—

(*a*) whether the Government are aware that the present water supply scheme for Shorapur Town in Gulbarga District is inadequate due to lack of rain this yeer ;

(*b*) if so, the immediate steps taken by them in this matter ?

A.—Sri R. M. PATIL (Minister for Municipal Administration).—

(*a*) Yes.

(*b*) Government have sanctioned payment of a loan of Rs. 91,000 to the Town Municipal Council to take up on emergency basis the work to draw water from Tangi well which is about 2 miles from Shorapur and complete it before the on set of the summer.

Sri RAJA PID NAIK.—Is it not a fact that the present arrangement for adequate water supply has failed even after spending huge amount ?

† Sri R. M. PATIL.—That is why additional provision has been made and an amount of Rs. 91,000 has been granted as a loan to this Municipality to meet this inadequacy.